ಮೈಸೂರ ಗೆಜೆಟ್.

ಸಂ 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ಸಂ. 24.

ಬೆಂಗಳೂರು, ಗುರುವಾರ, ಜೂನ್ ತಾ|| 17, ಸನ್ 1909.

II ನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣದ ಇಸ್ತಿಹಾರ್‌ನಾಮೆಗಳು.

ಫೈನ್ಯಾನ್ಷಿಯಲ್ ಇಲಾಖೆ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರಿಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷ್ಟಗಳನ್ನು ಮೈಸೂರು ಸೀಮೆಯ ಶ್ರೀಮಂ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷ್ಟನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷ್ಟ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷ್ಟ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದು ಕ್ಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷ್ಟ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.